ತಯಾರಿಸುತ್ತಿದ್ದಾರಾ ಎಂದು ಇತ್ತೀಚೆಗೆ ಅನುಮಾನ ಶುರುವಾಗಿದೆ. ಹಿಂದೆಲ್ಲಾ ತಮ್ಮ ಕಂಪನಿಯಲ್ಲಿ ತಯಾರಾದ ವಸ್ತುಗಳು ರಿಪೇರಿಗೆ ಬಂದರೆ ಕಂಪನಿಗೇ ಅವಮಾನ ಎಂಬ ಉಮೇದಿನಲ್ಲಿ ವಸ್ತುಗಳನ್ನು ತಯಾರಿಸುತ್ತಿದ್ದರು. ಆಗ ಜನರಿಗೂ ಹಾಳಾದಾಗೆಲ್ಲಾ ಹೊತ್ತುಕೊಂಡು ಹೋಗಿ ರಿಪೇರಿ ಮಾಡಿಸುವಷ್ಟು, ಮತ್ತೆ ಅದು ತಯಾರಾಗುವವರೆಗೆ ಕಾಯುವಷ್ಟು ತಾಳ್ಮೆ ಇರುತ್ತಿತ್ತೇನೋ. ಈಗ ಬೇರೆಯೇ ಆಗಿದೆ. ರಿಪೇರಿಗೆ ದುಡ್ಡು, ಸಮಯ ವ್ಯರ್ಥ ಮಾಡುವ ಬದಲು ಹೊಸತೇ ತೆಗೆದುಕೊಳ್ಳಬಹುದಲ್ಲ ಎಂಬುದೇ ಎಲ್ಲರ ಜೀವನ ಮಂತ್ರವಾಗಿದೆ. ಯಾರ ಬಳಿಯಲ್ಲಾದರೂ ನಿಮ್ಮ ಮೊಬೈಲೋ, ಲ್ಯಾಪ್ ಟಾಪೋ ಹಾಳಾಗಿದೆ ಎಂದು ಹೇಳಿ ನೋಡಿ. 'ಎಷ್ಟು ಟೈಮಾಯ್ತು ತಗೊಂಡು?' ಎಂದು ಕೇಳುತ್ತಾರೆ. ಒಂದು ವರ್ಷಕ್ಕಿಂತ ಹೆಚ್ಚಿಗೆ ಹೇಳಿದಿರೋ 'ವಾರಂಟಿ ದಾಟಿದ್ಮೇಲೆ ಅವೆಲ್ಲಾ ಅಷ್ಟೇ ಕಣ್ರೀ, ಸುಮ್ನೆ ರಿಪೇರಿ ಗಿಪೇರಿ ಅಂತ ಓಡಾಡೋ ಬದ್ಲು ಹೊಸಾದೇ ತಗೊಳ್ಳಿ, ಇಂತಿಂಥಾ ಮಾಡೆಲ್ಲುಗಳು ಮಾರ್ಕೆಟ್ಟಿಗೆ ಬಂದಿದಾವೆ' ಎಂದು ಬ್ರೋಚರನ್ನೇ ಹೇಳುತ್ತಾರೆ!. ಈಗ ಎಲ್ಲರಿಗೂ ತೊಂದರೆಯಾಗುತ್ತಿರುವುದು ರಿಪೇರಿಗೆಂದು ಮಾಡಬೇಕಾದ ಓಡಾಟವಲ್ಲ, ಅಕಸ್ಮಾತ್ ರಿಪೇರಿಯಾಗಿಬಿಟ್ಟರೆ ಮತ್ತೆ ಅದೇ ವಸ್ತುವನ್ನು ಉಪಯೋಗಿಸಬೇಕಲ್ಲ ಎಂಬ ಬೇಸರ!. ಕೊಳ್ಳುಬಾಕತನವೋ, ಚಂಚಲತೆಯೋ ಒಟ್ಟಿನಲ್ಲಿ ನಮ್ಮ ಮನಸ್ಸುಗಳೇ ದುರ್ಬಲವಾಗಿವೆ, ಅದಕ್ಕೇ ಸಮಾಜವೂ ದುರ್ಬಲವಾಗುತ್ತಾ ಹೋಗುತ್ತಿದೆಯೇನೋ. ಕಂಪನಿಗಳೂ ಕೂಡಾ ತಮ್ಮ ಆಲೋಚನೆಯ ವರಸೆ ಬದಲಾಯಿಸಿವೆ, ನೀತಿಯನ್ನು ಮರೆಯುತ್ತಿವೆ. ಒಂದು ಮೊಬೈಲು ತೆಗೆದುಕೊಂಡವನು ಹದಿನೈದು ವರ್ಷ ಮತ್ತೆ ಮಾರ್ಕೆಟ್ ಕಡೆ ಮುಖ ಹಾಕದಿದ್ದರೆ ನಮ್ಮ ಕಂಪನಿಗೇ ನಷ್ಟ ಎಂಬ ದೃಷ್ಟಿಕೋನ ಈಗ ಅವತರಿಸಿದೆ. ಅದಕ್ಕೇ ಇರಬೇಕು, ತೊಂಬತ್ತರ ದಶಕದಲ್ಲಿ ಬರುತ್ತಿದ್ದ ನೋಕಿಯಾ ಮೊಬೈಲುಗಳು ಬುರ್ಜ್ ಖಲೀಫಾ ಮೇಲಿಂದ ಬಿದ್ದರೂ ಒಡೆಯುತ್ತಿರಲಿಲ್ಲ, ಈಗಿನವು ಸುಮ್ಮನೇ ಜೇಬೊಳಗೆ ಇಟ್ಟುಕೊಂಡಾಗಲೇ ಸ್ಕ್ರಾಚ್ ಆಗಿಬಿಟ್ಟಿರುತ್ತವೆ!

ಇತ್ತೀಚೆಗೆ ಮೆಟ್ರೋದಲ್ಲಿ ಹೋಗುತ್ತಿರುವಾಗ ಒಂದು ಘಟನೆಯಾಯಿತು. ಐದಾರು ಗೆಳೆಯರ ಲೋಕಾಭಿರಾಮ ಚರ್ಚೆ ಇದ್ದಕ್ಕಿದ್ದಂತೆ ರಾಜಕೀಯದತ್ತ ಹೊರಳಿತು. ಒಂದಿಬ್ಬರು ಎಡಪಂಥೀಯರು, ಉಳಿದವರು ಬಲಪಂಥೀಯರು. ಚರ್ಚೆಯೊಂದು ಜಗಳವಾಗಿ ಪರಿವರ್ತನೆಯಾಗಲು ಇನ್ನೇನು ಬೇಕು?! ಒಬ್ಬರ ಬೆನ್ನಿಗೆ ಇನ್ನೊಬ್ಬರು ಹೊಟ್ಟೆ ತಾಗಿಸಿಕೊಂಡು ನಿಲ್ಲುವಷ್ಟು ಜಂಗುಳಿ ಇದ್ದಿದ್ದರಿಂದ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪದೇ ಬೈಗುಳದಲ್ಲಿಯೇ ಜಗಳ ಒಂದೊಂದೇ ಹಂತವನ್ನು ದಾಟಿ ಮುಂದೆ ಹೋಗುತ್ತಿತ್ತು. ಇನ್ನೇನು ತುತ್ತತುದಿ ಮುಟ್ಟಬೇಕು, ಒಬ್ಬರ ಮುಖಕ್ಕೆ ಒಬ್ಬರು ಉಗುಳಿಕೊಳ್ಳಬೇಕು, ಅಷ್ಟರಲ್ಲಿ ಒಂದು ಸುರಂಗದೊಳಗೆ ರೈಲು ನಿಂತೇಹೋಯಿತು. ಪ್ರಯಾಣಿಕರಾರೂ ಭಯಪಡಬಾರದು, ಸಣ್ಣ ಅಡಚಣೆ, ಬೇಗ ರಿಪೇರಿ ಆಗುತ್ತೆ ಎನ್ನುವ ಯುವತಿಯ ಧ್ವನಿ ಮತ್ತೆ ಮತ್ತೆ ಕೇಳುತ್ತಿದ್ದರೂ ನಿಧಾನಕ್ಕೆ ಎಲ್ಲರಲ್ಲೂ ಆತಂಕ ಮಡುಗಟ್ಟಲು ಶುರುವಾಯಿತು. ಎ.ಸಿ. ಆಫ್ ಆಗಿ ಧಗೆ ಹೆಚ್ಚಿ, ಕೊನೆಗೊಮ್ಮೆ ದೀಪಗಳು ಆರಿದಾಗಲಂತೂ ಸಣ್ಣ ಮಟ್ಟದ ಕಿರುಚಾಟಗಳೂ ಕೇಳಲು ಶುರುವಾದವು. ಅಷ್ಟರವರೆಗೂ ಜಗಳವಾಡುತ್ತಿದ್ದ ಗೆಳೆಯರು ಗಾಬರಿಯಿಂದ ಅತ್ತಿತ್ತ ನೋಡುತ್ತಾ ಒಬ್ಬರನ್ನೊಬ್ಬರು ಸಂತೈಸಲು ಪ್ರಯತ್ನಿಸುತ್ತಿದ್ದರು. ಅವರ ದುರದೃಷ್ಟಕ್ಕೆ 'ಎಡ' ಮತ್ತು 'ಬಲ' ಎರಡೂ ಬಾಗಿಲುಗಳು ಮುಚ್ಚಿಕೊಂಡಿದ್ದವು!. ಇನ್ನೇನು 'ಸುರಂಗದೊಳಗೆ ನೂರಾರು ಜನರ ದಾರುಣ ಸಾವು' ಎಂಬ ಪೇಪರ್ ಸುದ್ದಿಯಾಗುತ್ತೇವೆ ಎಂದು ಎಲ್ಲರೂ ಖಾತ್ರಿ ಮಾಡಿಕೊಳ್ಳುವಷ್ಟರಲ್ಲಿ ರಿಪೇರಿ ಕಾರ್ಯ ಸುಸೂತ್ರವಾಗಿ ಮುಗಿದು ರೈಲು ಮತ್ತೆ ಮುಂದೆ ಹೊರಟಿತು. ಮುಂದಿನ ನಿಲ್ದಾಣ ಬರುವವರೆಗೂ ಜನಭರಿತವಾಗಿದ್ದ ರೈಲಿನಲ್ಲಿ ಅಸಾಧ್ಯ ಮೌನ!. ಭಾವನೆಗಳೂ ಸೇರಿದಂತೆ ಇಂದು ಜಗತ್ತಿನಲ್ಲಿ ಎಲ್ಲವೂ ಆ ಕ್ಷಣದ ನೆಮ್ಮದಿಗಾಗಿಯೇ ಹುಟ್ಟುವಂತವಾಗಿವೆ. ಇಂದು ನಿಜವಾಗಲೂ ರಿಪೇರಿ ಎನ್ನುವುದೇನಾದರೂ ಬೇಕಾಗಿದ್ದರೆ ಅದು ನಮ್ಮ ಮನಸ್ಸಿಗೆ ಮಾತ್ರ. ವಸ್ತುಗಳನ್ನು, ದೇಹವನ್ನು ಬೇರೆಯವರು ರಿಪೇರಿ ಮಾಡಬಹುದು, ನಮ್ಮ ಮನಸ್ಸುಗಳಿಗೆ ಯಾವತ್ತಿದ್ದರೂ ನಾವೇ ಮೆಕ್ಯಾನಿಕ್ ಆಗಬೇಕಲ್ಲವೇ?

●